[Govt. of Karnataka C.R.P. 67]

| Deposition Sheets (RP.No.57) Form No.4 (Civil) | IN THE COURT OF CIVIL JUDGE & J.M.F.C., KARKALA. Criminal Case No. 435/2021 ..................................................Vs.................................... |
|---|---|

ಸಾಕ್ಷಿದಾರನ ಹೆಸರು ಃ ಯೋಗೀಶ್

ತಂದೆಯ ಹೆಸರುಃ ದಿ. ಪದ್ಮ ಮೇಸ್ತ್ರಿ ಪಿ.ಡಬ್ಲ್ಯೂಃ 2

ಪ್ರಾಯ ಃ 51 ವರ್ಷ

ಉದ್ಯೋಗ ಃ ಹೆಚ್ ಸಿ 2208, ಕಾರ್ಕಳ ನಗರ ಪೋಲಿಸ್ ಠಾಣೆ

ವಾಸ ಃ ಕಾರ್ಕಳ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 07-03-2026

ದಂ ಪ್ರ ಸಂ ಕಲಂ 299 ರಡಿಯಲ್ಲಿ ಸಾಕ್ಷಿಯ ಹೇಳಿಕೆಃ

ನಾನು ಕಳೆದ 3 ವರ್ಷದಿಂದ ಕಾರ್ಕಳ ನಗರ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 24-07-2024 ರಂದು ಮಾನ್ಯ ನ್ಯಾಯಲಯದ ಸಿಸಿ ನಂ. 435/2021 ರಲ್ಲಿ ಇಸ್ತಿಯಾರ್ ಮಹಜರಿನಂತೆ ಉದ್ಘೋಷಣಾ ವಾರೆಂಟ್ ಜಾರಿಯಾಗಿದ್ದು ಹೆಚ್ ಸಿ 2208 ಯೋಗೀಶ್ ಆದ ನಾನು ಮಿತ್ತಬೈಲು, ಮೂಡಬಿದ್ರೆ ತಾಲೂಕು, ಮಂಜುನಾಥ್ ಗಣಪತಿ ಭಟ್ ಎಂಬುವವರ ಬಗ್ಗೆ ವಿಚಾರಿಸಲಾಗಿ ಆಪಾದಿತನ ಬಗ್ಗೆ ಮಾಹಿತಿ ದೊರೆತಿರುವುದಿಲ್ಲ. ಸದರಿ ವಾರೆಂಟ್ ಮಂಜುನಾಥ್ ಗಣಪತಿ ಭಟ್ ರವರು ಕಂಡು ಬಂದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಸಿಸಿ ನಂ. 435/2021 ರಲ್ಲಿ ದಿಃ 27-08-2024 ರಂದು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗುವಂತೆ ತಿಳಿಸಲಾಯಿತು. ನಂತರ ಪುತ್ತಿಗೆ ಗ್ರಾಮದಲ್ಲಿ ಟಾಂ ಟಾಂ ಬಾರಿಸಿ, ಉದ್ಘೋಷಣಾ ವಾರೆಂಟ್ ನ್ನು ಪಂಚರ ಸಮಕ್ಷಮ ಒಂದು ಪ್ರತಿಯನ್ನು ಬಸ್ ನಿಲ್ದಾಣದ ಗೋಡೆಗೆ, ಇನ್ನೊಂದು ಪ್ರತಿಯನ್ನು ಪುತ್ತಿಗೆ ಗ್ರಾಮ ಪಂಚಾಯತ್‌ನ ನೋಟಿಸ್ ಬೋರ್ಡಿಗೆ ಅಂಟಿಸಲಾಯಿತು. ಆರೋಪಿಯು ಕಂಡು ಬಂದಲ್ಲಿ ಕಾರ್ಕಳ ಪೋಲಿಸ್

ಠಾಣೆಗೆ ಮಾಹಿತಿ ನೀಡಿ ಎಂದು ಸಾರ್ವಜನಿಕರಲ್ಲಿ ಕೋರಲಾಯಿತು. ಸದರಿ ಮಹಜರನ್ನು ದಿಃ 24-07-2024 ರಂದು ಬೆಳಿಗ್ಗೆ 11.00 ಗಂಟೆಯಿದ 12.30 ಗಂಟೆಯವರೆಗೆ ತಯಾರಿಸಲಾಯಿತು. ಪಂಚರಾಗಿ ಪ್ರವೀಣ್ ಇವರ ಸಹಿ ಪಡೆಯಲಾಯಿತು. ನ್ಯಾಯಾಲಯದಿಂದ ನೀಡಿದ ಘೋಷಣಾ ವಾರೆಂಟನ್ನು ನಿಪಿ-6 ಎಂದು, ಇಸ್ತಿಯಾರ್ ಮಹಜರನ್ನು ನಿಪಿ-7 ಎಂದು, ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಆರೋಪಿಯು ತಲೆಮರೆಸಿಕೊಂಡಿದ್ದು, ಪಾಟೀ ಸವಾಲು ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ